# ದೀಪಿಕಾ ಸಂದರ್ಶನ ಠುಸ್!



ಕಾರ್ತಿಕ್ ಆರ್ಯನ್ ಯೂಟ್ಯೂಬ್‌ನಲ್ಲಿ ವೈದ್ಯೆಯೊಬ್ಬರ ಜೊತೆಗೆ ಕೋವಿಡ್19 ವೈರಸ್ ಬಗ್ಗೆ ನಡೆಸಿದ ಸಂದರ್ಶನ ಹಿಟ್ ಆದ ಬಳಿಕ ಇನ್ನಷ್ಟು ತಾರೆಯರು ಕೋವಿಡ್ ಬಗ್ಗೆ ಮಾತನಾಡತೊಡಗಿದ್ದಾರೆ. ಬಾಲಿವುಡ್‌ನ 'ನಂಬರ್ ಒನ್' ನಟಿ ದೀಪಿಕಾ ಪಡುಕೋಣೆ ಕೂಡಾ ಇದಕ್ಕೆ ಹೊರತಲ್ಲ. ಆದರೆ ದೀಪಿಕಾ ದೊಡ್ಡ ಮಟ್ಟದಲ್ಲಿ ಸುದ್ದಿ ಮಾಡಬೇಕೆಂದು ಹೊರಟ ಸಂದರ್ಶನದ ಪ್ರಸಾರ ಕೊನೆ ಕ್ಷಣದಲ್ಲಿ ಠುಸ್ ಆಗಿದೆ.

ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಡೈರೆಕ್ಟರ್ ಜನರಲ್ ಡಾ. ಟೆಡ್ರೋಸ್ ಗೆಬ್ರೆಸಸ್ ಜೊತೆ ದೀಪಿಕಾ ನಡೆಸಿದ ಸಂದರ್ಶನ ಏಪ್ರಿಲ್ 23ರಂದು ಇನ್‌ಸ್ಟಾಗ್ರಾಮ್‌ನಲ್ಲಿ ಪ್ರಸಾರ ಆಗಲಿದೆ ಎಂದು ಪ್ರಕಟಿಸಲಾಗಿತ್ತು. 'ಕೊರೊನಾ ಕಾಲದಲ್ಲಿ ಮಾನಸಿಕ ಆರೋಗ್ಯದ ಮಹತ್ವ' ಎನ್ನುವುದು ಸಂದರ್ಶನದ ಮುಖ್ಯ ವಿಷಯವಾಗಿತ್ತು. ಆದರೆ ಕೊನೇ ಕ್ಷಣದಲ್ಲಿ ಆ ಸಂದರ್ಶನದ ಪ್ರಸಾರ ರದ್ದು ಮಾಡಲಾಯಿತು. 'ಕೆಲವು ಅನಿವಾರ್ಯ ಹಾಗೂ ನಿಯಂತ್ರಿಸಲಾಗದ ಕಾರಣಗಳಿಂದಾಗಿ ಈ ಸಂದರ್ಶನ ಪ್ರಸಾರ ಆಗುತ್ತಿಲ್ಲ' ಎಂದು ಸ್ವತಃ ದೀಪಿಕಾ ದುಃಖ ಹಂಚಿಕೊಂಡರು. ಅದಕ್ಕೆ ಕಾರಣ ಡಾ. ಟೆಡ್ರೋಸ್ ಬಗ್ಗೆ ಜಾಲಿಗರಿಗೆ ಇರುವ ಸಿಟ್ಟು!

ದೀಪಿಕಾ ಈ ಸಂದರ್ಶನ ಪ್ರಸಾರದ ಜಾಹೀರಾತು ಕೊಟ್ಟ ಬೆನ್ನಲ್ಲೇ ನೂರಾರು ಜಾಲಿಗರು ತಮ್ಮ ಸಿಟ್ಟು ವ್ಯಕ್ತಪಡಿಸಿದ್ದಾರೆ. ಅದಕ್ಕೆ ಕಾರಣ ಡಾ. ಡೆಟ್ರೋಸ್ ಕೊರೊನಾ ವಿಷಯದಲ್ಲಿ ಚೀನಾಗೆ ಕೊಟ್ಟ ಕ್ಲೀನ್ ಸರ್ಟಿಫಿಕೇಟ್! ಜನವರಿಯಲ್ಲಿಯೇ ಚೀನಾದಲ್ಲಿ ಕೊರೊನಾ ವೈರಸ್‌ನ ಹಾವಳಿ ಮಿತಿ ಮೀರಿತ್ತು. ಆಗ ಈ ವೈರಸ್ ಮಾನವರಿಂದ ಮಾನವರಿಗೆ ಹರಡುವುದಿಲ್ಲ ಎಂಬ ಚೀನಾ ಸರ್ಕಾರದ ಹೇಳಿಕೆಯನ್ನು ಡಾ. ಡೆಟ್ರೋಸ್ ಬಲವಾಗಿ ಬೆಂಬಲಿಸಿ ಹೇಳಿಕೆ ನೀಡಿದ್ದರು. ಅದನ್ನು ನೆನಪಿಟ್ಟುಕೊಂಡಿದ್ದ ಜಾಲಿಗರು, ದೀಪಿಕಾರನ್ನು ಹಿಗ್ಗಾಮುಗ್ಗಾ ಟೀಕಿಸಿದ್ದಾರೆ. 'ಇಡೀ ವಿಶ್ವಕ್ಕೆ ಕೊರೊನಾ ವೈರಸ್ ಹರಡಲು ಕಾರಣರಾದವರು ಡಾ. ಡೆಟ್ರೋಸ್. ಅವರ ಜೊತೆಗೆ ನೀವೇಕೆ ಸಂದರ್ಶನ ನಡೆಸಿದ್ದೀರಿ' ಎಂದು ಜಾಲಿಗರು ಜಾಡಿಸತೊಡಗಿದ ಬಳಿಕ, ಸಂದರ್ಶನ ಪ್ರಸಾರವನ್ನು ದೀಪಿಕಾ ರದ್ದುಗೊಳಿಸಿದ್ದಾರೆ.

# ಮಿಥುನ್ ಪಿತೃವಿಯೋಗ



ಮಿಥುನ್ ಚಕ್ರವರ್ತಿ ಕೋವಿಡ್ ಸಂಕಟದ ಮಧ್ಯೆಯೇ ತಮ್ಮ ತಂದೆಯನ್ನು ಕಳೆದುಕೊಂಡಿದ್ದಾರೆ. ಮಿಥುನ್ ದಾ ಯಾವುದೋ ಶೂಟಿಂಗ್‌ಗೆಂದು ಬೆಂಗಳೂರಿಗೆ ಬಂದವರು ಲಾಕ್‌ಡೌನ್‌ನಿಂದಾಗಿ ಒಂದು ತಿಂಗಳಿಂದ ಇಲ್ಲೇ ಉಳಿದುಕೊಂಡಿದ್ದರು. ಕಳೆದ ವಾರ ಅವರ ತಂದೆ ಬಸಂತಕುಮಾರ್ ಚಕ್ರವರ್ತಿ ಮುಂಬೈಯಲ್ಲಿ ನಿಧನ ಹೊಂದಿರು. ಮುಂಬೈಗೆ ತೆರಳಲಾಗದೆ ಮಿಥುನ್ ಚಡಪಡಿಸಿದ್ದು ಸುದ್ದಿಯಾಗಿದೆ. ಬಸಂತ್‌ಕುಮಾರ್ ಅವರಿಗೆ ದೊಡ್ಡ ಮಗ ಮಿಥುನ್. ಉಳಿದ ಮೂವರು ಹೆಣ್ಣುಮಕ್ಕಳು. ಮಿಥುನ್‌ರ ದೊಡ್ಡ ಮಗ ಮುಂಬೈಯಲ್ಲೇ ಇದ್ದವನು ಕುಟುಂಬದ ಸದಸ್ಯರ ಜೊತೆಗೆ ಪರಿಸ್ಥಿತಿ ನಿಭಾಯಿಸಿದ್ದಾನೆ.

ಮಿಥುನ್ ನಿಜ ನಾಮಧೇಯ ಗೌರಂಗ್ ಚಕ್ರವರ್ತಿ. 1976ರಲ್ಲಿ 'ಮೃಗಯಾ' ಎಂಬ ಕಲಾತ್ಮಕ ಚಿತ್ರದಲ್ಲಿ ನಟಿಸಿದ್ದು ಮೊದಲ ಅನುಭವ, ಈ ಚಿತ್ರದ ನಟನೆಗೆ ರಾಷ್ಟ್ರಪ್ರಶಸ್ತಿ ಸಿಕ್ಕಿದ್ದು ಮಿಥುನ್‌ಗೆ ಬಾಲಿವುಡ್ ಬಾಗಿಲು ತೆರೆಯಿತು. ಆ ಬಳಿಕ 80ರ ದಶಕದಲ್ಲಿ 'ಡಿಸ್ಕೊ ಡಾನ್ಸರ್' ಎಂಬ ಚಿತ್ರ ಮಿಥುನ್‌ರನ್ನು ತಾರಾಪಟ್ಟಕ್ಕೆ ಏರಿಸಿತು. ಆ ಚಿತ್ರ ಭಾರತ ಮಾತ್ರವಲ್ಲ, ರಷ್ಯಾ, ಚೀನಾಗಳಲ್ಲೂ ಸೂಪರ್‌ಹಿಟ್ ಆಗಿದ್ದು ಆ ಕಾಲದ ದೊಡ್ಡ ಸುದ್ದಿ.

# ಸಲ್ಮಾನ್ ವಿಡಿಯೊ



ಸಲ್ಮಾನ್ ಖಾನ್ ಮುಂಬೈ ಹೊರವಲಯದ ಪನ್ವೇಲ್‌ನ ತೋಟದ ಮನೆಯಲ್ಲಿ ಕುಟುಂಬದವರ ಜೊತೆ ಕೊರೊನಾ ರಜೆ ಅನುಭವಿಸುತ್ತಿದ್ದಾರೆ. ಇದೀಗ ಸಲ್ಮಾನ್‌ನ ಹೊಸ ವಿಡಿಯೊ ಹಾಡು 'ಪ್ಯಾರ್ ಕರೋನಾ..' ಯೂಟ್ಯೂಬ್‌ನಲ್ಲಿ ಸಖತ್ ವೈರಲ್ ಆಗಿದೆ. ತೋಟದ ಮನೆಯಲ್ಲಿ ಇದ್ದುಕೊಂಡೇ ಕೊರೊನಾ ಕುರಿತ ಈ ಹಾಡನ್ನು ಚಿತ್ರೀಕರಿಸಲಾಗಿದೆ. 'ಪ್ಯಾರ್ ಕರೋನಾ.. ಮದದ್ ಕರೋನಾ.. ಸಬ್ರ್ ರಖೋನಾ..' ಎನ್ನುವ ಹಾಡನ್ನು ಸ್ವತಃ ಸಲ್ಮಾನ್ ಬರೆದು ಹಾಡಿದ್ದಾನೆ. ಫೋನ್ ಕ್ಯಾಮೆರಾದಲ್ಲೇ ಶೂಟ್ ಮತ್ತು ಎಡಿಟ್ ಮಾಡಿರುವ ಈ ವಿಡಿಯೋಗೆ ಮ್ಯೂಸಿಕ್ ಕಂಪೋಸಿಂಗ್ ಮಾತ್ರ ಮುಂಬೈಯಲ್ಲಿ ನಡೆದದ್ದಂತೆ. 'ತೋಟದ ಮನೆಯಲ್ಲಿ ವಿಡಿಯೊ ಆರಾಮ್‌ಸೆ ಮಾಡಬಹುದು. ಸಿನಿಮಾ ಶೂಟಿಂಗ್ ಮಾಡದಿದ್ದರೇನಂತೆ...' ಎಂದು ಗಡ್ಡಧಾರಿ ಸಲ್ಲೂ ಮಿಯಾ ಸಖತ್ ಖುಷಿ ಪಟ್ಟಿದ್ದಾನೆ. ಹಾಡಿನ ಮಧ್ಯೆ 'ಸಾರೇ ಜಹಾಂ ಸೆ ಅಚ್ಛಾ.. ಹಿಂದೂಸಿತಾ ಹಮಾರಾ..' ಎನ್ನುವ ಸಾಲುಗಳನ್ನು ಮಿಕ್ಸ್ ಮಾಡಿರುವುದು ವಿಡಿಯೊ ಜನಪ್ರಿಯತೆಯನ್ನು ಹೆಚ್ಚಿಸಿದೆ.